SRI M.Y.GHORPADE: May I reply in English since the Hon'ble Member has asked to the question in English?

MR.SPEAKER: Yes.

SRI M.Y. GHORPADE: The village has not been included in the World Bank Assistance. The World Bank Assistance Programme is a 383 crores programme. This village is not included right now. Certain criteria have been laid down for selection of villages under the World Bank Programme. As the Hon'ble Member knows, the World Bank Programme is under two phases, namely Phase-1 and Phase-2. Phase-1 is for two years and Phase-2 is for five years. In all it is a Seven-years` programme. They have laid down certain criteria as to what type of villages should be included in this programme in the first phase and in the second phase. In the Phase-1, the village should have a population of one thousand to five thousand. In the second phase, villages having a population of 10,000 and above can only be taken only if there is a special case for it. Now, the difficulty for taking your village under Phase-1 is that your village is already having a population of more than 10,000 as per 1991 census. It was 8,000 and odd according to 1981 census and today it is more than 10,000 and already there are water supply schemes which provide water upto 20 to 30 litres per head per day.

Since it is not a problemative village, due to the fact that more than 20 to 30 litres of water per head per day has been provided and due to the fact that the population of Yellur village is more than 10,000, it has not been included in the first phase. If there is any problem, we will consider.

ವಿಷಯ:- ಮಳೆ ಮತ್ತು ನೆರೆ ಹಾವಳಿಗೆ ತುತ್ತಾದ ಹರಿಹರ ತಾಲ್ಲೂಕಿನ ಗ್ರಾಮಗಳಿಗೆ ಪರಿಹಾರ ಬಿಡುಗಡೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೪೭:- (೬೨೨)
ಡಾ:ವೈ. ನಾಗಪ್ಪ (ಹರಿಹರ)
ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಮ್ಮ ರಾಜ್ಯದಲ್ಲಿ ಮಳೆ ಮತ್ತು ನೆರೆ ಹಾವಳಿಗೆ ತುತ್ತಾದ ಜಿಲ್ಲೆಗಳೆಷ್ಟು? ಹಾಗೂ ಹಾನಿಯಾದ ನಷ್ಟವೆಷ್ಟು?

ಆ) ನಮ್ಮ ರಾಜ್ಯಕ್ಕೆ ಬಿಡುಗಡೆಯಾದ ಪರಿಹಾರದ ಮೊತ್ತವೆಷ್ಟು?

ಇ) ಒಟ್ಟು ಬಿಡುಗಡೆಯಾದ ಪರಿಹಾರದಲ್ಲಿ ಚಿತ್ರದುರ್ಗ ಜಿಲ್ಲೆಯ ಪಾಲು ಎಷ್ಟು, ಮತ್ತು ಹರಿಹರ ತಾಲ್ಲೂಕಿಗೆ ಬಿಡುಗಡೆ ಮಾಡಿದ ಹಣ ಎಷ್ಟು?

ಈ) ಹರಿಹರ ತಾಲ್ಲೂಕಿಗೆ ಬಿಡುಗಡೆಯಾದ ಮೊತ್ತದಲ್ಲಿ ಪಿ.ಡಬ್ಲ್ಯೂ.ಡಿ. ನೀರಾವರಿ ಮತ್ತು ಜಿಲ್ಲಾಪರಿಷತ್ ಇಲಾಖೆಗಳಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ?

ಉ) ಮೇಲೆ ಬಿಡುಗಡೆಯಾದ ಹಣದಲ್ಲಿ ಹರಿಹರ ತಾಲ್ಲೂಕಿಗೆ ಜಾನುವಾರುಗಳ, ಬೆಳೆ, ರೈತರ ಪಂಪುಸೆಟ್ಟುಗಳ ಮತ್ತು ಮನೆಗಳ ನಾಶಕ್ಕೆ ಯಾವ ಯಾವ ರೂಪದಲ್ಲಿ ಎಷ್ಟು ಹಣ ಬಿಡುಗಡೆ ಆಗಿದೆ ಮತ್ತು ಇದು ಸರಿಯಾಗಿ ವಿನಿಯೋಗವಾಗಿದೆಯೇ?

ಶ್ರೀ ಎಂ.ರಾಜಶೇಖರ ಮೂರ್ತಿ
(ಕಂದಾಯ ಸಚಿವರು)

ನೆರೆ ಹಾವಳಿಗೆ ತುತ್ತಾದ ಜಿಲ್ಲೆಗಳು-	.೧೫	
ಖಾಸಗಿ ಆಸ್ತಿ-ಪಾಸ್ತಿಗಾದ ನಷ್ಟ	೨೦೭.೧೫	ಕೋಟಿ ರೂ.
ಸಾರ್ವಜನಿಕ ಆಸ್ತಿ-ಪಾಸ್ತಿಗಾದ ನಷ್ಟ	೧೦೦.೭೨	ಕೋಟಿ ರೂ.
ಒಟ್ಟು ರೂ.	೩೦೭.೮೭	ಕೋಟಿ

ವಿವರಗಳು, ಈ ಕೆಳಕಂಡಂತಿವೆ - (ಕೋಟಿ ರೂ.ಗಳಲ್ಲಿ)

೧) ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ಮೊತ್ತ	೩೦.೩೭
೨) ರಾಜ್ಯ ಸರ್ಕಾರವು ಬಿಡುಗಡೆ ಮಾಡಿರುವ ಮೊತ್ತ	೧೬.೭೫
ಒಟ್ಟು -ರೂ.	೪೭.೧೨ ಕೋಟಿ

ಸರ್ಕಾರದಿಂದ ಚಿತ್ರದುರ್ಗ ಜಿಲ್ಲೆಗೆ ಪರಿಹಾರ ಕಾಮಗಾರಿಗಳಿಗೆ ಬಿಡುಗಡೆ ಮಾಡಿರುವ ಮೊತ್ತ ೪೫೧.೧೦ ಲಕ್ಷ ರೂ.ಗಳು. ಹರಿಹರ ತಾಲ್ಲೂಕಿಗೆ ೬೧.೦೦ ಲಕ್ಷ ರೂ.ಗಳನ್ನು ಹಾನಿಗೊಳಗಾದ ಖಾಸಗಿ ಆಸ್ತಿ-ಪಾಸ್ತಿಗೆ ಪರಿಹಾರ ನೀಡಲು ಬಿಡುಗಡೆ ಮಾಡಿದೆ, ಮತ್ತು ಕಟ್ಟಡ ಸಾಮಗ್ರಿಗಳ ರೂಪದಲ್ಲಿ ೭೫.೦೦ ಲಕ್ಷ ರೂ.ಗಳನ್ನು ಹಂಚಲಾಗಿದೆ.

ವಿವರಗಳು ಈ ಕೆಳಕಂಡಂತಿವೆ - (ಲಕ್ಷ ರೂ.ಗಳಲ್ಲಿ)

ಇಲಾಖೆ	ಬಿಡುಗಡೆ ಮಾಡಿದ ಮೊತ್ತ	ಹರಿಹರ ತಾಲ್ಲೂಕಿಗೆ ಉಪಯೋಗಿಸಿರುವ ಮೊತ್ತ
ಪಿ.ಡಬ್ಲ್ಯು.ಡಿ	೩೦.೦೦	೭.೫೦
ನೀರಾವರಿ	೩೩.೭೫	೧೪.೫೦
ಒಟ್ಟು	೬೩.೭೫	೨೨.೦೦

ವಿವರಗಳನ್ನು ಈ ಕೆಳಗೆ ನೀಡಲಾಗಿದೆ –

ವಿವರಗಳು	ಸಂಖ್ಯೆ	ಮೊಬಲಗು
೧. ಭಾಗಶಃ ಬಿದ್ದ ಮನೆಗಳಿಗೆ ೫೦೨೦ ಪೂರ್ಣ ಬಿದ್ದಮನೆಗಳಿಗೆ		೨೫,೧೦,೦೦೦.೦೦
೨. ನಗದು ರೂಪದಲ್ಲಿ	೯೬೨	೧೯,೨೪,೦೦೦.೦೦
೩. ಪೂರ್ಣ ಬಿದ್ದಮನೆಗಳಿಗೆ ಸಾಮಗ್ರಿಗಳ ರೂಪದಲ್ಲಿ	೯೬೨	೨೫,೦೧,೨೦೦.೦೦
೪. ಜೀವ ಹಾನಿ	೧	೪೦,೦೦೦.೦೦
೫. ಜಾನುವಾರುಗಳ ಹಾನಿ	೫೪೮	೧,೧೨,೩೬೮.೦೦
೬. ಗಂಜಿ ಕೇಂದ್ರಕ್ಕಾಗಿ	–	೯೮,೦೫೭.೦೦
ಒಟ್ಟು		೭೧,೮೫,೬೨೫.೦೦

ಹೌದು.

Dr Y.Nagappa: I would like to bring to the notice of the Hon'ble Minister that the total loss incurred due to the recent flood havoc in the State is 307.87 crores as per the answer given by the Hon'ble Minister out of which the Government has released Rs. 47.12 crores towards compensation and out of 47.12 crores, a sum of Rs. 4.5 crores has been released to Chitradurga District. Out of this 4.5 crores, a sum of Rs. 61 lakhs only is released to Harihar taluk. I want to bring to the notice of the Hon'ble Minister that, we have been telling that farmers are the backbones of this country. The amount released to them is very meagre. They have lost their harvested crops, houses, properties, and thousands of pumpsets. I request the Hon'ble Minister to answer in this regard.

Sri M. Rajashekaramurthy:- The Hon'ble Member has repeated what, I stated in my reply. ಮಾನ್ಯ ಅಧ್ಯಕ್ಷರೇ, ನಾನು ಏನು ಲಿಖಿತ ಉತ್ತರ ಕೊಟ್ಟಿದ್ದೇನೆ ಅದನ್ನೇ ಮಾನ್ಯ ಸದಸ್ಯರು ರಿಪೀಟ್ ಮಾಡಿದ್ದಾರೆ.ಅವರ ಮನಸ್ಸಿನಲ್ಲಿ ಏನಿದೆ ಎಂದರೆ, ನಾವು ಬಿಡುಗಡೆ ಮಾಡಿರುವ ೪೭.೧೨ ಕೋಟಿಯಲ್ಲಿ ಹರಿಹರಕ್ಕೆ ಏನು ೬೩.೭೫ ಲಕ್ಷ ರೂಪಾಯಿ ಕೊಟ್ಟಿದ್ದೇವೆ ಅದು ಸಾಲದು. ಅದರ ಜೊತೆಗೆ ಮತ್ತೆ ೨೫ ಲಕ್ಷ ರೂಪಾಯಿ ಬೆಲೆಯ ಮೆಟೀರಿಯಲ್ಸ್ ಏನು ಕೊಟ್ಟಿದ್ದೇವೆ ಅದನ್ನು ಅವರು ನೋಡಿಲ್ಲ ಎಂದು ಕಾಣುತ್ತದೆ. ಕೆಲವು ಕಡೆ ಹಣ ಬಿಡುಗಡೆ ಮಾಡುತ್ತಿದ್ದೇವೆ. ಇನ್ನೂ ಸ್ವಲ್ಪ ಬಿಡುಗಡೆ ಮಾಡಬೇಕಾಗಿದ್ದು, ಬಿಡುಗಡೆ ಮಾಡುವಾಗ ಅವರ ತಾಲ್ಲೂಕಿನ ಅವಶ್ಯಕತೆ ನೋಡಿ ಹಣ ಬಿಡುಗಡೆ ಮಾಡುತ್ತೇವೆ.

Dr Y.Nagappa: I had asked the amount released to the Zilla Parishats. There, there is no answer. They have released only 7.50 lakhs in respect of P.W.D., and Rs. 14.50 lakhs in respect of Irrigation. Irrigation has got its own reserved amount to spend. After the introduction of the Zilla Parishats, most of the rural areas are covered under the Zilla Parishats. They have not released a single naya paisa to the Zilla Parishats. There are no roads. Even the cattles cannot walk on the roads. How do you expect the human beings to walk on the roads?

ಶ್ರೀ ಎಂ. ರಾಜಶೇಖರ ಮೂರ್ತಿ:- ಈಗಾಗಲೇ ನಾನು ಉತ್ತರದಲ್ಲಿ ಕೊಟ್ಟಿದ್ದೇನೆ. ಪಿ.ಡಬ್ಲ್ಯು.ಡಿ.ಯಲ್ಲಿ ೩೦ ಹಾಗೂ ನೀರಾವರಿ ಇಲಾಖೆ ಅಡಿಯಲ್ಲಿ ೩೩.೭೫ ಲಕ್ಷ ಹೀಗೆ ಒಟ್ಟು ೬೩.೭೫ ಲಕ್ಷ ರೂಪಾಯಿ ಕೊಟ್ಟಿದೆ. ಮಾನ್ಯ ಸದಸ್ಯರು ಜಿಲ್ಲಾಪರಿಷತ್ತಿಗೆ ಹಣ ಬಿಡುಗಡೆ ಆಗಿಲ್ಲ ಎಂದು ಹೇಳುತ್ತಿದ್ದಾರೆ. ಜಿಲ್ಲಾಪರಿಷತ್ತಿನವರು ಯಾವ ಯಾವ ರಸ್ತೆಗೆ ಹಣ ಬೇಕೆಂದು ಹೇಳುತ್ತಾರೋ, ಬೇಡಿಕೆ ಬಂದಾಗ, ಮುಂದಿನ ಸಾರಿ ಹಣ ಬಿಡುಗಡೆ ಮಾಡುವಾಗ ಅದನ್ನು ಗಮನದಲ್ಲಿಟ್ಟು ಕೊಂಡು ಅದಕ್ಕೂ ರಿಲೀಸ್ ಮಾಡುತ್ತೇವೆ.

(ಗೊಂದಲ)

೧೧.೦೦ ಎ.ಎಂ.

ಅಧ್ಯಕ್ಷರು:- ಮಾನ್ಯ ಸದಸ್ಯರು ಬೇಕಾದರೆ ಮಿನಿಸ್ಟರ್ ಛೇಂಬರ್‌ಗೆ ಹೋಗಿ ಅವರನ್ನು ಭೇಟಿ ಮಾಡಿ ಚರ್ಚೆ ಮಾಡಿ ಮುಂದಿನ ಪ್ರಶ್ನೆ ಬಾಬುರಾವ್ ಚವಾಣ್.

ವಿಷಯ:- ಶಹಾಬಾದ್ ಮತ ಕ್ಷೇತ್ರದಲ್ಲಿ ಕುಡಿಯುವ ನೀರಿನ ಕೊರತೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೪೮:- (೬೪೦)
ಶ್ರೀ ಬಾಬುರಾವ್ ಚವಾಣ್ (ಶಹಾಬಾದ್)
ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೇ?

ಅ) ಶಹಾಬಾದ್, ಮತ ಕ್ಷೇತ್ರದಲ್ಲಿ ಬರುವ ಕೆಲವು ಹಳ್ಳಿಗಳಿಗೆ ಕುಡಿಯುವ ನೀರಿನ ತೊಂದರೆಗಳಿವೆಯೇ ಹಾಗೂ ಅವುಗಳು ಯಾವವು?
ಆ) ಸರಕಾರವು ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಎಂ.ವೈ. ಘೋರ್ಪಡೆ
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಸಚಿವರು)

ಶಹಬಾದ್ ಮತ ಕ್ಷೇತ್ರದಲ್ಲಿ ಕುಡಿಯುವ ನೀರಿನ ಅಭಾವವನ್ನು ಸದ್ಯಕ್ಕೆ ಎದುರಿಸುತ್ತಿರುವ ೮ ಹಳ್ಳಿಗಳಿದ್ದು ಅವುಗಳು ಈ ಕೆಳ ಕಂಡಂತವೆ:-

೧) ಕಡಹಳ್ಳಿ
೨) ಚುಮ್ಮನೂರು
೩) ಕಡಸೂರು
೪) ಕೊಂಚೂರು
೫) ಸೋಮನಾಥಹಳ್ಳಿ